## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.926/2018

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ದೊಡ್ಡಬಸಪ್ಪ | CW: 15 | PW: 6 |
| ತಂದೆಯ ಹೆಸರು | : | ಚಿಕ್ಕಪ್ಪ | | |
| ವಯಸ್ಸು | : | 46 | | |
| ವೃತ್ತಿ | : | ಹೆಚ್ ಸಿ, ಹೊನ್ನಾಳಿ ಪೋಲೀಸ್ ಠಾಣೆ | | |
| ವಾಸಸ್ಥಳ | : | ಹೊನ್ನಾಳಿ | | |

ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 2015 ರಿಂದ 2020 ರವರೆಗೆ ನ್ಯಾಮತಿ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 27.06.2018 ರಂದು ರಾತ್ರಿ 9.30 ರ ಸಮಯದಲ್ಲಿ ನನಗೂ ಮತ್ತು ಚಾಸಾ 12 ರಿಂದ 14 ರವರಿಗೆ ದಾನಿಹಳ್ಳಿ ಕೊರಚರಹಟ್ಟಿ ಕಾಲೋನಿಗೆ ಬರುವಂತೆ ಚಾಸಾ 11 ರವರು ಹೇಳಿದ ಮೇರೆಗೆ ಚಾಸಾ 11 ರವರ ಜೊತೆ ನಾವೆಲ್ಲರೂ ಇಲಾಖಾ ಜೀಪಿನಲ್ಲಿ ದಾನಿಹಳ್ಳಿ ಕೊರಚರಹಟ್ಟಿ ಕಾಲೋನಿಗೆ ರಾತ್ರಿ 10 ಗಂಟೆಗೆ ಹೋದೆವು. ಅಲ್ಲಿ ಚಾಸಾ 1, 4 ರಿಂದ 10 ರವರು ಹಾಜರಿದ್ದರು. ಹೊನ್ನಾಳಿ ಠಾಣಾ ಗುನ್ನೆ ನಂ.430/2017 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಪತ್ತೆ ಮತ್ತು ದಸ್ತಗಿರಿಗೆ ಚಾಸಾ 1, 4 ರಿಂದ 10 ರವರಿಗೆ ಸಹಕರಿಸಲು ನಾವು ಹೋಗಿದ್ದೆವು. ಹೊನ್ನಾಳಿ ಠಾಣಾ ಗುನ್ನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸತೀಶ್ ಮತ್ತು ಸುರೇಶ್ ರವರನ್ನು ವಿಚಾರಣೆಗಾಗಿ ಮನೆಯಿಂದ ಆಚೆ ಬರುವಂತೆ ತಿಳಿಸಲಾಗಿ ಅವರು ಆಚೆ

ಬಂದಿದ್ದು ಚಾಸಾ 1 ರವರು ಅವರನ್ನು ವಿಚಾರಣೆ ಮಾಡುತ್ತಿದ್ದಾಗ ಪೋಲೀಸರು ಸತೀಶ್ ಮತ್ತು ಸುರೇಶ್ ರವರನ್ನು ಕರೆದುಕೊಂಡು ಹೋಗುತ್ತಿದ್ದಾರೆ ಇವರಿಗೆ ಒಂದು ಗತಿ ಕಾಣಿಸಬೇಕು ಎಂದು ಈ ಪ್ರಕರಣದ 1 ನೇ ಆರೋಪಿಯು ನಮಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದಾಗ ಉಳಿದ ಆರೋಪಿಗಳೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ನಮಗೆ ಅವಾಚ್ಯ ಶಬ್ದಗಳಿಂದ ಬೈದರು.

ಆಗ 7 ನೇ ಆರೋಪಿಯು ಚಾಸಾ 1 ರವರ ಕೊರಳಪಟ್ಟಿ ಹಿಡಿದು ಎಳೆದಾಡಿ ಹರಿದಿರುತ್ತಾರೆ. 1 ನೇ ಆರೋಪಿಯು ಕೈಗಳಿಂದ ಚಾಸಾ 1 ರವರ ಎದೆಗೆ, ಮೈಕೈಗೆ ಗುದ್ದಿ ಅಲ್ಲಿದ್ದಂತಹ ಒಂದು ಕಲ್ಲಿನಿಂದ ಅವರ ಬಲಗಾಲಿಗೆ ಹೊಡೆದಿರುತ್ತಾರೆ. ಈ ಘಟನೆಗೆ ಸಂಬಂಧಿಸಿದಂತೆ ಚಾಸಾ 1 ರವರು ನ್ಯಾಮತಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಈ ಸಂಬಂಧ ನಾನು ಚಾಸಾ 21 ರವರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 6 ಮತ್ತು 8 ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಎಂ ಜಿ ವಕೀಲರಿಂದಃ-</u>

ದಿಃ 27.06.2018 ರಂದು ರಾತ್ರಿ 9.30 ರ ಸಮಯದಲ್ಲಿ ನನಗೂ ಮತ್ತು ಚಾಸಾ 12 ರಿಂದ 14 ರವರಿಗೆ ದಾನಿಹಳ್ಳಿ ಕೊರಚರಹಟ್ಟಿ ಕಾಲೋನಿಗೆ ಬರುವಂತೆ ಚಾಸಾ 11 ರವರು ಹೇಳಿದ ಮೇರೆಗೆ ಚಾಸಾ 11 ರವರ ಜೊತೆ ನಾವೆಲ್ಲರೂ ಇಲಾಖಾ ಜೀಪಿನಲ್ಲಿ ದಾನಿಹಳ್ಳಿ ಕೊರಚರಹಟ್ಟಿ ಕಾಲೋನಿಗೆ ರಾತ್ರಿ 10 ಗಂಟೆಗೆ ಹೋದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಲ್ಲಿ ಚಾಸಾ 1, 4 ರಿಂದ 10 ರವರು ಹಾಜರಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹೊನ್ನಾಳಿ ಠಾಣಾ ಗುನ್ನೆ ನಂ.430/2017 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಪತ್ತೆ ಮತ್ತು ದಸ್ತಗಿರಿಗೆ ಚಾಸಾ 1, 4 ರಿಂದ 10 ರವರಿಗೆ ಸಹಕರಿಸಲು ನಾವು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಹೊನ್ನಾಳಿ ಠಾಣಾ ಗುನ್ನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸತೀಶ್ ಮತ್ತು ಸುರೇಶ್ ರವರನ್ನು ವಿಚಾರಣೆಗಾಗಿ ಮನೆಯಿಂದ ಆಚೆ ಬರುವಂತೆ ತಿಳಿಸಲಾಗಿ ಅವರು ಆಚೆ ಬಂದಿದ್ದು ಚಾಸಾ 1 ರವರು ಅವರನ್ನು ವಿಚಾರಣೆ ಮಾಡುತ್ತಿದ್ದಾಗ ಪೋಲೀಸರು ಸತೀಶ್ ಮತ್ತು ಸುರೇಶ್ ರವರನ್ನು ಕರೆದುಕೊಂಡು ಹೋಗುತ್ತಿದ್ದಾರೆ ಇವರಿಗೆ ಒಂದು ಗತಿ ಕಾಣಿಸಬೇಕು ಎಂದು ಈ ಪ್ರಕರಣದ 1 ನೇ ಆರೋಪಿಯು ನಮಗೆ ಅವಾಚ್ಯ ಶಬ್ದಗಳಿಂದ

ಬೈಯ್ಯುತ್ತಿದ್ದಾಗ ಉಳಿದ ಆರೋಪಿಗಳೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಆಗ 7 ನೇ ಆರೋಪಿಯು ಚಾಸಾ 1 ರವರ ಕೊರಳಪಟ್ಟಿ ಹಿಡಿದು ಎಳೆದಾಡಿ ಹರಿದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯು ಕೈಗಳಿಂದ ಚಾಸಾ 1 ರವರ ಎದೆಗೆ, ಮೈಕೈಗೆ ಗುದ್ದಿ ಅಲ್ಲಿದ್ದಂತಹ ಒಂದು ಕಲ್ಲಿನಿಂದ ಅವರ ಬಲಗಾಲಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಘಟನೆಗೆ ಸಂಬಂಧಿಸಿದಂತೆ ಚಾಸಾ 1 ರವರು ನ್ಯಾಮತಿ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಸಂಬಂಧ ನಾನು ಚಾಸಾ 21 ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ ಎಂದರೆ ಹೊನ್ನಾಳಿ ಸಿಆರ್ ನಂ.430/2017. ಈ ಪ್ರಕರಣದ ಆರೋಪಿಗಳು ಹೊನ್ನಾಳಿ ಸಿಆರ್ ನಂ.430/2017 ರ ಪ್ರಕರಣದಲ್ಲಿ ಆರೋಪಿಗಳಲ್ಲ ಎಂದರೆ ಸರಿಯಲ್ಲ. ಹೊನ್ನಾಳಿ ಸಿ ಆರ್ ನಂ.430/2017 ರ ಪ್ರಕರಣದ ಆರೋಪಿ ಸತೀಶ್ ರವರು ಈ ಪ್ರಕರಣದಲ್ಲಿ ಆರೋಪಿಯಾಗಿಲ್ಲ ಎಂದರೆ ಸರಿಯಲ್ಲ. ನಾವು ಘಟನಾ ಸ್ಥಳಕ್ಕೆ ಹೋದಾಗ ಎಷ್ಟು ಜನ ಇದ್ದರು ಎಂದರೆ ನಮ್ಮ ಸಿಬ್ಬಂದಿ ಇದ್ದರು, ಸಾರ್ವಜನಿಕರು ಎಷ್ಟು ಜನ ಇದ್ದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ರಾತ್ರಿ 10 ಗಂಟೆ ಸಮಯದಲ್ಲಿ ಸಾರ್ವಜನಿಕರು ಮಲಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು ಆ ಸಮಯದಲ್ಲಿ ವಿದ್ಯುತ್ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ನಾನು ಮತ್ತು ನಮ್ಮ ಇಲಾಖಾ ಸಿಬ್ಬಂದಿಗಳು ಅನುಚಿತ ವರ್ತನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ಇಲಾಖಾ ಸಿಬ್ಬಂದಿಗಳು ರಾತ್ರಿ ಸಮಯದಲ್ಲಿ ಆರೋಪಿಗಳ ಮನೆಯಲ್ಲಿ ಅತಿಕ್ರಮವಾಗಿ ನುಗ್ಗಿ ಮನೆಯ ಹೆಂಗಸರ ಜೊತೆ ಅಸಭ್ಯವಾಗಿ ವರ್ತಿಸಿರುತ್ತೇವೆ ಎಂದರೆ ಸರಿಯಲ್ಲ. ಸಿಆರ್ ನಂ.430/2017 ಪ್ರಕರಣದ ಆರೋಪಿ ಸತೀಶ್ ರವರು ಆರೋಪಿಗಳ ಮನೆಯವರು ಎಂದರೆ ಸರಿ. ಆ ಪ್ರಕರಣದ ಸತೀಶ ಪತ್ತೆಯಾಗದ ಕಾರಣ ಈ ಪ್ರಕರಣದ ಆರೋಪಿಗಳಿಗೆ ಆತನ ಸಂಬಂಧಿಕರಾಗಿದ್ದರಿಂದ ನಾವು ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಸ್ಥಳಕ್ಕೆ ನಾವೆಲ್ಲರೂ ಸಮವಸ್ತ್ರದಲ್ಲಿ ಹೋಗಿರಲಿಲ್ಲ ಎಂದರೆ ಸಾಕ್ಷಿ ನನ್ನನ್ನು ಬಿಟ್ಟು ಉಳಿದವರು ಸಮವಸ್ತ್ರ ಧರಿಸಿದ್ದರು ಎಂದು ನುಡಿಯುತ್ತಾರೆ. ನಾವು ಆರೋಪಿಗಳ ಮನಗೆ ನುಗ್ಗಿ ಅವರನ್ನು ಬಲವಂತದಿಂದ ಎಳೆದುಕೊಂಡು ಬರುತ್ತಿದ್ದಾಗ ಚಾಸಾ 1 ರವರು ಆಯಾತಪ್ಪಿ ಆರೋಪಿಗಳ ಮನೆ ಮುಂದೆ ಚರಂಡಿಗೆ ಬಿದ್ದು

ಗಾಯಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಯಾರಿಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ, ಹಲ್ಲೆ ಮಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ 8 ನೇ ಆರೋಪಿಯು ಸಿಆರ್ 430/2017 ರ ಪ್ರಕರಣದ ಆರೋಪಿ ಅಲ್ಲ ಎಂದರೆ ಸರಿಯಲ್ಲ. ಸಿಆರ್ 430/2017 ರ ಆರೋಪಿ ಸತೀಶ್ ರವರು ಪತ್ತೆಯಾಗದ ಕಾರಣ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಿಆರ್ 430/2017 ರ ಪ್ರಕರಣವು ರಾಜೀಯಾಗಿ ಮುಕ್ತಾಯವಾಗಿರುತ್ತದೆ ಎಂದರೆ ಗೊತ್ತಿಲ್ಲ. ಮುದ್ದೆ ಮಾಲಿಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.